# <u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ</u>

**ಸಿ.ಸಿ.ನಂ.2550/2025**

ಸಿ.ಡಬ್ಲ್ಯು 03
ಪಿ.ಡಬ್ಲ್ಯು 04

| | |
|---|---|
| ಸಾಕ್ಷಿದಾರರ ಹೆಸರು | - **ಗೋಯ್ದು ಸೋಮಾ ಗೌಡಾ** |
| ತಂದೆಯ ಹೆಸರು | - ಸೋಮಾ ಗೌಡಾ |
| ವಯಸ್ಸು | - 34 ವರ್ಷ |
| ಉದ್ಯೋಗ | - ಖಾಸಗಿ ಕೆಲಸ |
| ವಾಸ್ತವ್ಯ | - ಗೋಕರ್ಣ |

(ಇಂದು ದಿನಾಂಕಃ **19-01-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

## <u>ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>

ನನಗೆ ಚಾಸಾ 1 ಹಾಗೂ 2 ರವರ ಪರಿಚಯ ಇದೆ. ನಾನು 6 ತಿಂಗಳ ಹಿಂದೆ ನನ್ನ ಕೆಲಸಕ್ಕಾಗಿ ಗೋಕರ್ಣದ ಕಡೆಗೆ ಹೋಗುತ್ತಿದ್ದಾಗ ಪೊಲೀಸರು ನನ್ನ ಬಳಿ ಹಲವಾರು ದಾಖಲಾತಿಗಳಿಗೆ ಸಹಿಯನ್ನು ಪಡೆದುಕೊಂಡಿದ್ದು, ನಾನು ಪೊಲೀಸರ ಕೋರಿಕೆಯ ಮೇರೆಗೆ ಸಹಿಯನ್ನು ಮಾಡಿರುತ್ತೇನೆ.

ಸಾಕ್ಷಿಗೆ ಮೂರು ದಾಖಲಾತಿಗಳನ್ನು ತೋರಿಸಿದ್ದು, ಸಾಕ್ಷಿಯು ಸದ್ರಿ ದಾಖಲಾತಿಗಳಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಗಳು **ಪಂಚನಾಮೆ** ಹಾಗೂ **ಕಚ್ಚಾ ನಕಾಶೆ**

**ಹಾಗೂ ಮೋಟಾರ ವಾಹನವನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಮಾಡಿದ ಪಂಚನಾಮೆ**ಯಾಗಿದ್ದು, ಅವುಗಳಲ್ಲಿ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ 2 ಎಂದು, ಕಚ್ಚಾ ನಕಾಶೆಯನ್ನು ಈಗಾಗಲೇ **ನಿ.ಪಿ.3**. ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.2ಸಿ ಹಾಗೂ 3ಸಿ ಎಂದು** ಗುರುತಿಸಲಾಯಿತು. **ಮೋಟಾರ ವಾಹನವನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಮಾಡಿದ ಪಂಚನಾಮೆಯನ್ನು ಈಗಾಗಲೇ ನಿಪಿ9,** ಸಾಕ್ಷಿಯ ಸಹಿಯನ್ನು **ನಿ.ಪಿ.9ಬಿ ಎಂದು** ಗುರುತಿಸಲಾಯಿತು. ಸದ್ರಿ ಸಂದರ್ಭದಲ್ಲಿ ತೆಗೆದ ಭಾವಚಿತ್ರವನ್ನು ನಿಪಿ10 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 4 ಹಾಗೂ 5ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ನಿಪಿ 2 ಹಾಗೂ 9 ರಲ್ಲಿ ಬರೆದಿರುವ ವಿಷಯ ನನಗೆ ತಿಳಿದಿಲ್ಲ. ನಿಪಿ 10ಹಾಗೂ ನಿಪಿ 4 ಹಾಗೂ 5 ನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಾನು ಎಲ್ಲಾ ದಾಖಲಾತಿಗಳಿಗೆ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕಃ 30/06/2025 ರಂದು ಚಾ 13 ರವರು ನನ್ನನ್ನು ಹಾಗೂ ಚಾಸಾ 2 ರವರನ್ನು ಘಟನಾ ಸ್ಥಳದ ಪಂಚನಾಮೆಯ ಕುರಿತಂತೆ ಘಟನಾ ಸ್ಥಳಕ್ಕೆ ಕರೆದಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಘಟನಾ ಸ್ಥಳದಲ್ಲಿ ಚಾಸಾ 1 ರವರು ತೋರಿಸಿದಂತೆ 12-00

ಗಂಟೆಯಿಂದ 12-20 ಗಂಟೆಯವರೆಗೆ ನಿಪಿ 2 ರಂತೆ ಪಂಚನಾಮೆಯನ್ನು ಮಾಡಿ ನಿಪಿ 3 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ ನಿಪಿ 4 ಹಾಗೂ 5 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

ದಿನಾಂಕಃ 30/06/2025 ರಂದು ಚಾಸಾ 13 ರವರು ನನ್ನನ್ನು ಹಾಗೂ ಚಾಸಾ 2 ರವರನ್ನು ಮೋಟಾರ ಸೈಕಲ್ ಪಂಚನಾಮೆಗೆ ಗೋಕರ್ಣ ಪೊಲೀಸ ಠಾಣಾ ಆವರಣಕ್ಕೆ ಕರೆದಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಘಟನಾ ಸ್ಥಳದಲ್ಲಿ ಚಾಸಾ 1 ರವರು ತೋರಿಸಿದಂತೆ 12-35 ಗಂಟೆಯಿಂದ 12-50 ಗಂಟೆಯವರೆಗೆ ನಿ.ಪಿ.9 ರಂತೆ ಪಂಚನಾಮೆಯನ್ನು ಮಾಡಿ ನಿ.ಪಿ.10 ರಂತೆ ಛಾಯಾಚಿತ್ರವನ್ನು ತಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 9 ರ ಸಮಯದಲ್ಲಿ ನನ್ನ ಹಾಗೂ ಚಾ3 ರವರ ಸಮಕ್ಷಮ ಪೊಲೀಸರು ಕೆಎ 47 ಎಲ್ 6055 ನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ,

ನಿಪಿ 9 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಹಾಗೂ ಸದ್ರಿ ವಾಹನವನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

**ಪಾಟೀ ಸವಾಲು –ಆರೋಪಿ ಪರ ಶ್ರೀಮತಿ. ಪಿ.ಎಚ್.ಕೆ. ವಕೀಲರಿಂದ**

ಅಪಘಾತಪಡಿಸಿದೆ ಎನ್ನಲಾದ ವಾಹನವನ್ನು ಯಾರಿಗೆ ಸಂಬಂಧಿಸಿದ್ದು ಎಂಬ ಬಗ್ಗೆ ನನಗೆ ತಿಳಿದಿಲ್ಲ.

**C.W.** 03    **P.W.** 04

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ